ಬೂಕನಕೆರೆ ವಿಜೇಂದ್ರ, ಮೈಸೂರು
ಇಲ್ಲೊಬ್ಬ ನಾಯಿಯ ಜೊತೆ ಮಾತನಾಡುತ್ತಾನಲ್ಲ?



ಅವನೇ ವಾಸಿ. ಎಷ್ಟೋ ಜನ ಗೂಬೆಗಳೊಡನೆ ಮಾತನಾಡುತ್ತಾರೆ.

ಬಿ. ಚಂದ್ರೇಗೌಡ, ಬೆಂಗಳೂರು
ನ್ಯೂಟನ್ನನ 'ಕ್ರಿಯೆ ಮತ್ತು ಪ್ರತಿಕ್ರಿಯೆ' ಸಿದ್ಧಾಂತವು ಯಾವ ಕ್ಷೇತ್ರದಲ್ಲಿ ಅತಿ ಹೆಚ್ಚು ಪರಿಣಾಮಕಾರಿ?
ಚುಡಾಯಿಸುವ ಹುಡುಗರು ತಿರುಗಾಡುವ ವಿಮೆನ್ಸ್ ಕಾಲೇಜಿನ ಕಾಂಪೌಂಡಿನ ಮುಂದೆ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಇತ್ತೀಚೆಗೆ ಹಿರಿಯರು ವಾಹನಗಳ ಚಾಲನೆ ಮಾಡುವರಲ್ಲ, ಅದು ಅವಶ್ಯವೋ, ವ್ಯಾಮೋಹವೋ?
ಅನಿವಾರ್ಯ. ಕುರುಕ್ಷೇತ್ರದಲ್ಲೂ ಕರ್ಣನ ರಥ ಓಡಿಸಿದವನು ಹಿರಿಯ ಶಲ್ಯನೇ.

ವಿ. ಹಮೀದ್, ವಿಟ್ಲ
ಹುಡುಗಿ ಒಪ್ಪಿದ್ದಾಳೆ. ಆಕೆಯ ತಾಯಿ ಒಪ್ಪುತ್ತಿಲ್ಲವಲ್ಲಾ, ಏನು ಮಾಡಲಿ?



ಆ ತಾಯಿಯ ಬಳಿ ನಿಮ್ಮಪ್ಪನನ್ನು ಕಳಿಸಿ. ಒಪ್ಪಿದರೆ ಎಲ್ಲ ಸಲೀಸಾದೀತು!

ದೀಪಕ್ ಆರ್. ಶೇಟ್, ಬೆಂಗಳೂರು
ಲುಂಗಿ ತೊಟ್ಟ ಹೀರೊಗಳ ಸಿನಿಮಾ ಹಿಟ್ ಆಗಲು ಕಾರಣ ಏನು ರಾಮ್?
'ಎಂಗ ಮಚ್ಚಾ ತಾ' ಎಂಬ ಫೀಲಿಂಗ್ ಉಂಟಾಗುವುದರಿಂದ.

ಎಸ್ಸೆನ್ ಮಹಾಬಲರಾವ್, ಎನ್ನಾರ್ಪುರ
ಹುಲ್ಲಿನ ರಾಶೀಲಿ ಸೂಜಿ ಸಿಗುತ್ತಿಲ್ಲ...?
ಮ್ಯಾಗ್ನೆಟ್ ಬಳಸಿ. ತಾನಾಗಿಯೇ ಬಳಿ ಬರುತ್ತದೆ.

ದಿನೇಶ್, ಗುಡ್ಡದೂರು
ಚುನಾವಣೆಗೂ, ಚಲಾವಣೆಗೂ ವ್ಯತ್ಯಾಸವೇನು?
ಮತದಾನವೇ. ಮತದಾನಕ್ಕೆ ಮುಂಚೆ ಚಲಾವಣೆ; ನಂತರ ಸ್ತಬ್ಧ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಒಂದೇ ಸೂರಿನಡಿ ವಿವಾಹೇತರ ಸಂಬಂಧಕ್ಕೆ (ಲಿವಿಂಗ್ ಟುಗೆದರ್) ಕಾನೂನು ಅನುಮತಿಸಬಾರದು. ನೀವೇನಂತೀರಿ?
ಗಂಟಿನ ಸಿಕ್ಕು ಬಿಡಿಸಿಕೊಳ್ಳಲು ಹೆಣಗುವುದಕ್ಕಿಂತ ಅರಿತು ಗಂಟು ಹಾಕಿಕೊಳ್ಳುವುದು ತಪ್ಪಲ್ಲ.

ಭಾರತೀ ಗಂಗಾಧರ್, ಬೆಂಗಳೂರು
ಗತದ ಚಿಂತೆಯಲ್ಲೇ ಸಿಲುಕಿದ್ದರೆ ಜೀವನದಲ್ಲಿ ಏಳ್ಗೆಯಿಲ್ಲವೆಂದು ಗೊತ್ತಿದ್ದರೂ ಮನದಲ್ಲಿ ಅದೇ ಚಿಂತೆ ಇರುತ್ತಲ್ಲ?
ಮನಸ್ಸನ್ನು ಹಾಳೆಯ ಬದಲು ಸ್ಲೇಟ್ ಮಾಡಿಕೊಳ್ಳಿ. ಅಳಿಸುವುದು ಸುಲಭವಾಗುತ್ತದೆ.

ಜಯಶ್ರೀ, ಬೆಂಗಳೂರು
ಅಹಂಕಾರಕ್ಕೂ, ದುರಹಂಕಾರಕ್ಕೂ ಏನು ವ್ಯತ್ಯಾಸ?
ಸ್ವಪರಿಚಯ ಅಹಂ (ನಾನು) ಕಾರ; 'ನನ್ನಿಂದಲೇ' ಎನ್ನುವುದು ದುರಹಂಕಾರ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
ಕಾಡಿನಲ್ಲಿರಬೇಕಾದ ಪ್ರಾಣಿಗಳೆಲ್ಲ ನಾಡನ್ನು ಕಾಡುತ್ತಿವೆಯಲ್ಲಾ, ಏಕೆ ರಾಮ್?
ಅವು ಎಲ್ಲಿದ್ದವೋ ಅಲ್ಲೇ ಇವೆಯಂತೆ. ನಾಡೇ ಕಾಡಿನವರೆಗೆ ಹೋಗಿಬಿಟ್ಟದೆಯಂತೆ.

ತೇಜು, ಕುರಂಕೋಟೆ ಅಂಚೆ
ಅಧಿಕಾರದಲ್ಲಿದ್ದಾಗ ಕೈಜೋಡಿಸಿ ಸುತ್ತಾಡುತ್ತಿದ್ದವರು ಅಧಿಕಾರವಿಲ್ಲವಾದಾಗ ತಿರುಗಿ ನೋಡುತ್ತಿಲ್ಲ?
ಕಬ್ಬಿನ ಸಿಪ್ಪೆ ರಸ ಕಳೆದುಕೊಂಡ ಮೇಲೆ ನೊಣಕ್ಕೇನು ಕೆಲಸ!

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಜನಪ್ರತಿನಿಧಿಗಳಿಗೆ ಬೆಂಗಾವಲು ಪಡೆ ಏಕೆ?
ತೋಳ, ಶ್ವಾನಗಳು ಅಲೆದಾಡುವುದೇ ಹಿಂಡುಗಳಲ್ಲಿ.

## ವಾರದ ಪ್ರಶ್ನೆ

ಜಗದೀಶ ಬಿ. ಹೊಸೂರು, ಮೈಸೂರು
ಸಂಜೆ ಹೊತ್ತು ಹೊರಗಡೆ ತಿನ್ನುವವರಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಏಕೆ?
ಏಕೆಂದರೆ ಗಂಡಸರು ಹೊರಗೆ ತಿನ್ನುವುದಿಲ್ಲ – ಬಾರ್‌ನೊಳಗೆ ಕುಳಿತು ತಿನ್ನುತ್ತಾರೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಯಾರಿಗೆ ಯಾರೂ ಇಲ್ಲ, ಪ್ರಪಂಚವೇ ನಾಟಕ ಎನಿಸುತ್ತಿದೆ. ತಾವೇನಂತೀರಿ?
ಹಾಗೇನಿಲ್ಲ. ಸತ್ತವನಿಗೂ ಚಟ್ಟದವನು, ಮಡಕೆಯವನು ಸಮೀಪವರ್ತಿಗಳಾಗುತ್ತಾರೆ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಕೃತಕತೆ ಇಲ್ಲದಿರುವ ಜಾಗ ಯಾವುದು?
ನಿಗಿನಿಗಿಸುತ್ತಿರುವ ಬೆಂಕಿಯ ಒಡಲು.

ಪಿ. ಜಯವಂತ ಪೈ, ಕುಂದಾಪುರ
ಕುರುಡನಿಗೂ, ಕುಡುಕನಿಗೂ ವ್ಯತ್ಯಾಸವೇನು?



ಕುರುಡ ತನ್ನ ಕಾಲ ಮೇಲೆ ತಾನು ನಿಲ್ಲಬಲ್ಲ.

ಬಿ.ಆರ್. ಉಷಾ, ಕೆನಡಾ
ಸಮಾಜ ಎಂದರೇನು?
ಸ–ಸಮಾನತೆ; ಮಾ–ಮಾನವೀಯತೆ; ಜ–ಜವಾಬ್ದಾರಿ ಇರಬೇಕಾದ ಮಾನವಸಮೂಹ.

ವಿಜಯಕುಮಾರ್ ಎಚ್.ಕೆ. ರಾಯಚೂರು
ಕರ್ಮ ಮತ್ತು ಕರ್ತೃತ್ವ ಭಾವವೇ ಇಲ್ಲವಾದೊಡೆ ಎಂತಯ್ಯ?
ಭಾವಪೂರ್ಣ (ಅಂತ್ಯ) ಕ್ರಿಯೆ ಆದೊಡಂತಯ್ಯ.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ
ಚೆಕಪ್‌ಗೂ, ಪಿಕಪ್‌ಗೂ ವ್ಯತ್ಯಾಸವೇನು?
ಚಿಕಿತ್ಸೆಗೆ ಮೊದಲು (ದೇಹ/ವಿಮೆ) ಚೆಕಪ್; ಚಿಕಿತ್ಸೆಯ ನಂತರ (ಆರೋಗ್ಯ/ದೇಹ) ಪಿಕಪ್.

■ ರಾಮ್